
ತಾಳಮದ್ದಳೆಗೆ ಹೋಗ್ಲಿಕ್ಕೆ ಅವರಿಬ್ರೂ ರೆಡಿ ಆಗ್ತಾ ಇದ್ರು. ಅಲ್ಲಿ ಇಂದ್ರಜಿತು – ತರಣಿಸೇನ ಕಾಳಗ ಪ್ರಸಂಗ ಅಂತ ನಿರ್ಣಯ ಆಗಿತ್ತು. ನಡುವೆ ಮಾರುತಿ ರಾಯರಿಗೆ ಸನ್ಮಾನ ಅಂತ ಕಾರ್ಯಕ್ರಮದ ಸಂಘಟಕರು ಘೋಷಿಸಿದ್ರು. ಬೆಳಿಗ್ಗೆ ಹೊರಟ ಮಕ್ಕಳು ಬೈಕಲ್ಲಿ ಇನ್ನೂ ಬರ್ಲಿಲ್ಲ ಅಂತ ಒಂದು ಕಡೆ ಟೆನ್ಷನ್. ಮತ್ತೊಂದು ಕಡೆ ದೂರದ ಪಾಂಬೆಟ್ಟಿಗೆ ಟೈಮಿಗೆ ಸರಿಯಾಗಿ ಹೋಗ್ಬೇಕು ಅನ್ನು ಆತುರ. ಹಾಗಾಗಿ ಇಬ್ರೂ ಗಡಿಗಡಿಗೆ (ಕ್ಷಣ ಕ್ಷಣಕ್ಕೆ) ಮಕ್ಕಳಿಗೆ ಫೋನ್ ಮಾಡಿ, ಎಲ್ಲಿದ್ದೀರಿ? ಎಲ್ಲೀ ತಂಕ ಬಂದ್ರಿ? ಅಂತೆಲ್ಲ ಕೇಳ್ತಾನೇ ಇರ್ತಿದ್ರು. ಶಿರಾಡಿ ಘಟ್ಟ ಇಳಿಯೂ ತಂಕ ಸಿಗ್ತಿದ್ದ ನೆಟ್‌ವರ್ಕ್ ಕಡೆಗೊಂದಷ್ಟು ಸಿಗ್ಲೇ ಇಲ್ಲ. ಮತ್ತೆಲ್ಲೋ ಸಿಕ್ಕಿ ಹೃಷಿಕೇಶ ಫೋನ್ ಮಾಡಿದ. ರಾಯರಿಗೆ ಸಿಗ್ನಲ್ ಸರಿಯಾಗಿ ಸಿಕ್ಕದೇ ಯೆಂಥದೂ ಕೇಳ್ಳೇ ಇಲ್ಲ. ಕಡೆಗೆ ಅವರ ಅಕ್ಕ ಹೇಳಿದ್ರು,ಯೆಂತಕ್ಕೆ ಅಷ್ಟೆಲ್ಲ ಮಂಡೆ ಬಿಸಿ ಮಾಡಿಕೊಳ್ಳೀ?ಏನು ಸಣ್ಣ ಮಕ್ಕಳಲ್ಲ. ಬಂದೇ ಬರ್ತಾರೆ. ನೀನು ಹಸ್ತೋದಕ ಹಾಕಿ ಊಟ ಮಾಡಿ ಹೊರಡು. ಆಗ್ಲೇ ಗಂಟೆ ಒಂದೂವರೆ ಆಯ್ತು. ತಾಳಮದ್ದಳೆಗೆ ಹೊತ್ತಾಗ್ತದೆ ಅಂತ ಗಟ್ಟಿ ಹೇಳಿದ್ಮೇಲೆ, ಹಾಗೆ ಮಾಡಿದ್ರು.

ಗೋವಿಂದ ಜೋಯಿಸರು ಸಾ ರಾಯರ ಮನೆಗೇ ಬಂದ್ರು. ಇಬ್ರೂ ಕಾರು ಹತ್ತಿ ಹೊರಟ್ರು. ರಾಯರ ಕಾರನ್ನು ಅವರೇ ಡ್ರೈವ್ ಮಾಡ್ತಿದ್ರು. ಜೋಯಿಸರು ಕಿವಿಗೆ ಫೋನ್ ಇಟ್ಟುಕೊಂಡೇ ಕೂತಿದ್ರು. ಲೈನ್ ಸಿಗ್ತದಾ ಅಂತ ನೋಡ್ತಿದ್ರು. ಮಕ್ಕಳು ಇನ್ನೂ ಬರದೇ ಇದ್ದದ್ರ ಬಗ್ಗೆ ಮಾತಾಡ್ತಾ ಇನ್ನೇನು ಕುದ್ರೆಬೆಟ್ಟಿನಿಂದ ಹೈವೇಗೆ ಟಚ್ಚಾಗ್ಬೇಕು ಅನ್ನುವಷ್ಟರಲ್ಲಿ ತಿರ್ಗಾಸಿನಲ್ಲಿ (ತಿರುವಿನಲ್ಲಿ) ಬೈಕೊಂದು ಫಾಸ್ಟಾಗಿ ಬಂದು ಕಾರಿಗೆ ಹೊಡೆಯಿತು. ಏನಾಯಿತು ಅಂತ ನೋಡುವಷ್ಟರಲ್ಲಿ ಬೈಕಿನಲ್ಲಿದ್ದ ಇಬ್ರೂ ಬಿದ್ದಾಗಿದೆ. ರಾಯರು ನೋಡ್ತಾರೆ ಅಶ್ವಿನ್ ಹೃಷಿಕೇಶ! ಜೋಯಿಸರಿಗೆ ಕಣ್ಣು ಕತ್ತಲೆ ಬಂದ ಹಾಗೆ ಆಯ್ತು. ತಮ್ಮ ಮಗ ರಕ್ತ ಮಡುವಿನಲ್ಲಿ. ಹಿಂದೆ ಇದ್ದ ಹೃಷೀಕೇಶ ಎದ್ದು ನಿಂತಿದ್ದ. 'ಅಪ್ಪಾ...... ಎಲ್ಲಿ ನೋಡಿ ಡ್ರೈವ್ ಮಾಡ್ತಿದ್ರೀ? ಕಂಪ್ಲೀಟ್ ರಾಂಗ್ ಸೈಡಲ್ಲಿ ಇದ್ದೀರಿ.... ನೋಡಿ ಅಶ್ವಿನ ನ ಅವಸ್ಥೆ ಅಂತ; ಕೂಗಾಡಿದ. ಅಷ್ಟೊತ್ತಿಗೆ ಪೇಟೆಯಲ್ಲಿದ್ದವರೆಲ್ಲ ಓಡಿ ಬಂದ್ರು. ಇನ್ನು ತಡ ಮಾಡೂದಲ್ಲ. ರಾಯರೇ ನಿಮ್ಮದೇ ಕಾರಲ್ಲಿ ಹಾಕುವಾ ಇವನನ್ನು. ಇಬ್ರನ್ನೂ ಕೂಡ್ಲೆ ಮಣಿಪಾಲಕ್ಕೆ ಕರ್ಕೊಂಡು ಹೋಗುವಾ ಅಂತ ಅಲ್ಲಿದ್ದವರು ಹೇಳಿದ್ರು. ನಂಗೆ ಕೈ ಕಾಲು ನಡುಗ್ತದೆ. ಡ್ರೈವಿಂಗ್ ಮಾಡ್ಲಿಕ್ಕೆ ಆಗೂದಿಲ್ಲ. ಅಂತ ಅಂದ್ರು ಅವ್ರು. ನೀವು ಅವ್ನನ್ನು ಹಿಡ್ಕೊಂಡು ಕೂತ್ಕೊಳ್ಳಿ ನಾನು ಕಾರು ಬಿಡ್ತೇನೆ ನಂಗೆ ಯೆಂತದೂ ಆಗ್ಲಿಲ್ಲ ಅಂದ ಹೃಷಿಕೇಶ. ಅಂತೂ ಅಶ್ವಿನ್ನನ್ನು ಕಾರಲ್ಲಿ ಹಾಕಿ ಮಣಿಪಾಲಕ್ಕೆ ಸ್ಪೀಡಾಗಿ ಬಂದ್ರು. ಡಾಕ್ಟ್ರು ಕೂಡ್ಲೆ ಪರೀಕ್ಷೆ ಮಾಡಿ, ಗಾಬರಿಯಾಗುವಂಥದ್ದು ಏನು ಇಲ್ಲ. ಕೈ ಮುರ್ದಿದೆ. ತೊಡೆ ಮೂಳೆ ಸಣ್ಣ ಬಿರುಕು ಬಿಟ್ಟಿದೆ. ಪ್ರಾಣಕ್ಕೆ ಯೆಂತದೂ ತೊಂದ್ರೆ ಇಲ್ಲ ಅಂತ ಹೇಳಿದಾಗಲೇ ಜೋಯಿಸರು ರಾಯರು ಉಸಿರು ಬಿಟ್ಟದ್ದು. ಜೋಯಿಸರೇ ನನ್ನನ್ನು ಮಾಫು ಮಾಡಿ. ನಿಮ್ಮ ಮಗನ ಕೈ ಕಾಲು ನನ್ನಿಂದಾಗಿ ಮುರಿಯಿತು. ಅಂತ ಕಣ್ಣೀರು ಹಾಕ್ತಾ ಕಾಲಿಗೆ ಬಿದ್ರು. ರಾಯರೇ ಇಷ್ಟೇ ಆಯ್ತಲ್ವಾ? ಅದು ಪುಣ್ಯ. ನೀವೇನೂ ಬೇಕೂಂತ ಮಾಡಿದ್ದಲ್ವಲ್ಲಾ? ಹೃಷಿಕೇಶನಿಗೂ ಪರೀಕ್ಷೆ ಮಾಡಿಸ್ಬೇಕು. ಯೆಂತ ಆಗ್ಲಿಲ್ಲ ಅಂತ ಇದ್ದಾನೆ. ಕೈ ಕಾಲು ನೋವು ಉಂಟು ಕಾಣಿಸ್ತದೆ. ಅಂತ ಜೋಯಿಸರು ಅಂದ್ರು. ಇಲ್ಲಪ್ಪಾ ನಂಗೆ ಯೆಂತದೂ ಆಗ್ಲಿಲ್ಲ. ಗುಂಡು ಕಲ್ಲಿನ ಹಾಗಿದ್ದೇನೆ. ಕೈ ಕಾಲು ನೋವುಂಟು ಅಷ್ಟೇ. ಅಂತ ಅಂದ ಅವ. ಜೋಯಿಸರು ತಮಗೆ ಹೀಗೆ ಹೀಗೆ ಆಗಿದೆ ಕಾರ್ಯಕ್ರಮಕ್ಕೆ ಬರ್ಲಿಕ್ಕೆ ಆಗೂದಿಲ್ಲ ಅಂತ ಸಂಘಟಕರಿಗೆ ಹೇಳಿಯಾಗಿತ್ತು. ಆದ್ರೆ ಅವ್ರು ಬಿಡ್ಬೇಕಲ್ವಾ? ಫೋನಿನ ಮೇಲೆ ಫೋನ್. ಏನಾಯ್ತು? ಯೆಂತಾಯ್ತು? ಅಂತ. ಕಡೆಗೆ ಒಂದಿಬ್ರು ಕಾರು ತೆಕ್ಕೊಂಡು ಮಣಿಪಾಲಕ್ಕೇ ಬಂದ್ರು. ಬಂದವರೇ,

'ರಾಯರೇ...... ಗಡಿಬಿಡಿ ಇಲ್ಲಾಂತಾದ್ರೆ ಎರಡ್ನೇ ಪ್ರಸಂಗಕ್ಕಾದ್ರೂ ಬಂದು ಸೇರಿಕೊಳ್ಳಿ. ಇಲ್ಲಿ ಆಸ್ಪತ್ರೆಯಲ್ಲಿ ನಿಮ್ಮ ಮಗ ಇರ್ತಾನೆ ಅವ್ನನ್ನು ನೋಡಿಕೊಳ್ಳಿಕ್ಕೆ. ದಯಮಾಡಿ ಕಾರ್ಯಕ್ರಮ ಸಂಘಟನೆ ಮಾಡಿದ ನಮಿಗೆ ಉಪಕಾರ ಮಾಡಿ' ಅಂತ ಕಾಲಿಗೆ ಬಿದ್ರು.

ಜೋಯಿಸರು ರಾಯರೂ ಆಗೂದೇ ಇಲ್ಲ ಅಂದ್ರು. ಕಡೆಗೆ ಜೋಯಿಸರ ಹೆಂಡತಿಯೇ ಒತ್ತಾಯ ಮಾಡಿ ಇಲ್ಲಿ ರಾಯರ ಮಗ ಇರ್ತಾನೆ. ನೀವು ಹೋಗಿ ಎರಡ್ನೇ ಪ್ರಸಂಗ ಆದ್ರೂ ಮುಗಿಸಿ ಬನ್ನಿ. ನಾಳೆಯಿಂದ ಬೇಕಾದ್ರೆ ಒಪ್ಪಿಕೊಂಡ ಕಾರ್ಯಕ್ರಮ ಕ್ಯಾನ್ಸಲ್ ಮಾಡಿ ಅಂದ್ರು. ಸರಿ ಇಬ್ರೂ ಬರ್ತೇವೆ, ನಿಮ್ಮ ಕಾರಲ್ಲೇ ಕರ್ಕೊಂಡು ಹೋಗಿ ವಾಪಸ್ ಇಲ್ಲೇ ತಂದು ಬಿಡ್ಬೇಕು. ನಾನು ಆಗಾಗ ಫೋನ್ ಅಥವಾ ಮೆಸೇಜ್ ಮಾಡ್ತಾ ಇರ್ತೇನೆ. ಅಶ್ವಿನ್ ಹೇಗಿದ್ದಾನೆ ಅಂತ ವರ್ತಮಾನ ಕೊಡ್ತಾ ಇರ್ಬೇಕು ತಿಳೀತಾ ಅಂತ ಮಗನಿಗೆ ಹೇಳಿದ್ರು ರಾಯರು. ಇಬ್ರೂ ಕಾರು ಹತ್ತಿ ಹೋದ್ರು.

ಅದಾಗಲೇ ಪಾಂಬೆಟ್ಟಿನಲ್ಲಿ ಇಂದ್ರಜಿತು ಕಾಳಗ ಮುಗ್ದಾಗಿತ್ತು. ತರಣಿಸೇನ ಕಾಳಗದಲ್ಲಿ ರಾವಣನ ಒಡ್ಡೋಲಗ ಸುರುವಾಗಿತ್ತು. ಎಲ್ಲರನ್ನೂ ಕಳಕೊಂಡ ರಾವಣನ ಬಳಿ ವಿಭೀಷಣನ ಮಗ ತರಣಿಸೇನ ತಾನು ಹೋರಾಟಕ್ಕೆ ಸಿದ್ಧನಿದ್ದೇನೆ. ತನ್ನನ್ನು ಕಳುಹಿಸಿಕೊಡು ಎನ್ನುವ ಸನ್ನಿವೇಶ ಸಾಗುತ್ತಿತ್ತು. ರಾವಣ ಒಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾನೆ. ನಂತರ ಯುದ್ಧರಂಗದ ದೃಶ್ಯ. ರಾಮನಾಗಿ ಮಾರುತಿರಾಯರು. ವಿಭೀಷಣನಾಗಿ ಜೋಯಿಸರು. ರಾವಣನ ಕಡೆಯ ವೀರಾಧಿವೀರರು ಯಾರು? ಪರಿಚಯಿಸು ಎಂದು ಹೇಳುವಾಗ ವಿಭೀಷಣ ತನ್ನ ಮಗ ತರಣಿಸೇನ ಬಂದಿದ್ದಾನೆ ಎನ್ನುವುದನ್ನು ಹೇಳದೆ ಉಪಾಯವಾಗಿ ತಪ್ಪಿಸಿಕೊಳ್ಳುತ್ತಾನೆ. ಜೋಯಿಸರ ವಿಭೀಷಣ ಮನೋಜ್ಞವಾಗಿ ಬಂತು. ರಾಮ ಗೊಂದಲಕ್ಕೆ ಬೀಳುತ್ತಾನೆ ನಂತರ ತರಣಿಸೇನ ಎದುರಾಗಿ ಅವನೊಡನೆ ಹೋರಾಟ. ಕಾಳಗದಲ್ಲಿ ಆತನ ಸಾವು. ಪ್ರಸಂಗ ಸಾಂಗವಾಗಿ ಸಾಗಿತ್ತು.



ವೇದಿಕೆಯಲ್ಲಿದ್ದಾಗಲೂ ಭಾಗವತರು ಪದ್ಯ ಹಡುವಾಗ ಅವರಿಬ್ಬರೂ ಅಶ್ವಿನ್ನ ಬಗ್ಗೆ ಮೆಸೇಜ್ ತಿಳ್ಕೊಳ್ಳುತ್ತಲೇ ಇದ್ದರು. ವಿಷಯ ಎಲ್ಲ ಸರಿಯಾಗಿದೆ ಅಂತ ತಿಳ್ಕೊಂಡು ನೆಮ್ಮದಿಯಲ್ಲಿ ಇದ್ರು. ಜೋಯಿಸರ ಪಾತ್ರ ಬೇಗನೇ ಮುಗ್ದದ್ದರಿಂದ ಸೈಡ್ವಿಂಗ್‌ನಲ್ಲಿ ನಿಂತುಕೊಂಡು ಆಗಾಗ ಫೋನ್ ಮಾಡಿ ಅಶ್ವಿನನ ಬಗ್ಗೆ ಹೆಂಡತಿಯಿಂದ ಮಾಹಿತಿ ತಿಳ್ಕೊಳ್ತಿದ್ರು. ರಾಯರು ಹುಬ್ಬು ಹಾರಿಸಿ, ಕಣ್ಸನ್ನೆಯ ಮೂಲಕವೇ 'ಯೆಂತದಾಯ್ತು? ಏನಾಯ್ತು?' ಅಂತ ಕೇಳ್ತಿದ್ರು. ಜೋಯಿಸರು ಏನೂ ಇಲ್ಲ ಆರಾಮವಾಗಿ ನೆಮ್ಮದಿಯಿಂದ ಇರಿ ಎಂಬಂತೆ ಸನ್ನೆ ಮಾಡ್ತಿದ್ರು.

ಒಂದೆರಡು ಸರ್ತಿ ಹಾಗೆ ಸನ್ನೆ ಬಂದ ಮೇಲೆ ರಾಯರಿಗೆ ಧೈರ್ಯ ಬಂತು. ಪ್ರಸಂಗ ಮುಗಿಸಿ ಸನ್ಮಾನ ತೆಕ್ಕೊಂಡು ಅವಸರವಸರವಾಗಿ ಜೋಯಿಸರನ್ನು ಹುಡುಕಿದ್ರು. ಅವರು ಕಾಣ್ಳಿಲ್ಲ. ದೂರದಲ್ಲಿ ಒಂದು ಕಡೆ ಹೋಗಿ ಗೋಡೆಗೆ ಬೆನ್ನು ಹಾಕಿ ನಿಂತದ್ದು ಕಂಡಿತು. ಜೋಯಿಸರೇ...... ಜೋಯಿಸರೇ........ ಅಂತ ಕರೀತಾರೆ ಅವರು ಮುಖ ತಿರ್ಗಿಸೂದೇ ಇಲ್ಲ. ಇವರೇ ಹೋಗಿ ಬೆನ್ನಿಗೆ ಕೈ ಹಾಕಿದ್ರೆ ಮುಖ ಮುಚ್ಚಿಕೊಂಡು ಸೇಂಕಿ ಸೇಂಕಿ (ಬಿಕ್ಕಿ ಬಿಕ್ಕಿ) ಅಳ್ತಾ ಇದ್ದಾರೆ! ಯೆಂತದಾಯ್ತು ಅಶ್ವಿನ್‌ಗೆ! ? ಅಂತ ರಾಯರು ಚೀರಿದ್ರು. ಜೋಯಿಸರು ತಲೆ ಅಲ್ಲಾಡಿಸ್ತಾ, ಅಶ್ವಿನ್ ಅಲ್ಲ ರಾಯರೇ.... ನಿಮ್ಮ ಹೃಷಿಕೇಶನಿಗೆ ಎದೆಗೆ ಗುದ್ದಿದ ಹಾಗೆ ಆದದ್ದು ಒಳಗೆಲ್ಲೋ ರಕ್ತ ಹೆಪ್ಪುಗಟ್ಟಿತ್ತಂತೆ. ನನ್ನ ಮಗನ ಉಪಚಾರಕ್ಕೇಂತ ನಿಂತಿದ್ದವ ಅಲ್ಲೇ ಕುಸಿದು ಬಿದ್ದು ಹೋಗಿಬಿಟ್ಟನಂತೆ ರಾಯರೇ!... ಅಂತ ಹೇಳಿ ಅವರನ್ನು ಅರಂಟಿ ಹಿಡ್ಕೊಂಡ್ರು ಕೂಗಿದ್ರು. (ಅತ್ತರು).

ರಾಯರು ಕುಸಿದು ಕೂತರು.

ಭಾಗವತರು ಮಂಗಲ ಹಾಡ್ತಿದ್ರು.

'ಮಾರನಯ್ಯನ ಮಾತ ಮೀರದೆ ಗೋಕುಲದೊಳು  
ಭೂವರೇಣ್ಯನ ಉದರದೊಳು ಪುಟ್ಟಿ  
ಘೋರ ಕಂಸಗೆ ತನ್ನ ರೂಪವ ತೋರಿ  
ಹಾರಿದೆ ಗಗನಕ್ಕೆ ಸೇರಿದೆ ಧರೆಗೆ......'